ಪುರಸಭೆ ವತಿಯಿಂದ ರೂ 7.80 ಲಕ್ಷ ಮೊತ್ತವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅವರ ಕೋರಿಕೆಯಂತೆ ಪಾವತಿಸಿರುತ್ತದೆ. ಭೌಗೋಳಿಕ ಸಮೀಕ್ಷೆ ಪೂರ್ಣಗೊಳ್ಳುವ ಹಂತದಲ್ಲಿದ್ದು ಯೋಜನಾ ವರದಿಯನ್ನು ಮಂಡಳಿಯ ವತಿಯಿಂದ ಶೀಘ್ರದಲ್ಲೇ ತಯಾರಿಸಿ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾಪಿಸಲು ಕ್ರಮ ವಹಿಸಲಾಗುತ್ತಿದೆ. ಹಾಗೂ ಯೋಜನೆ ಕೈಗೆತ್ತಿಕೊಳ್ಳಲು ಪುರಸಭೆಯ ಕೌನ್ಸಿಲ್‌ನಲ್ಲಿ ದಿನಾಂಕ: 17-06-2009 ರಂದು ಸೂಕ್ತ ಠರಾವನ್ನು ಅಂಗೀಕರಿಸಲಾಗಿರುತ್ತದೆ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ ನಂತರ ಆದ್ಯತೆಯ ಮೇರೆಗೆ ಹಾಗೂ ಅನುದಾನ ಲಭ್ಯತೆಯನ್ನು ಆಧಾರಿಸಿ ಆದೇಶ ಹೊರಡಿಸಿ, ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.

1068 ಶ್ರೀ ಶಂಕರಪಾಟೀಲ ಮುನೇನಕೊಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಬಾವಿ-ಚಳ್ಳಕೇರಿ ರಸ್ತೆ ನಿರ್ಮಾಣ ನರಗುಂದ ಸರಹದ್ದಿನವರೆಗೆ ಮುಗಿದಿದ್ದು ನವಲಗುಂದ ಸರಹದ್ದಿನಲ್ಲಿ ಕೆಲಸ ಪ್ರಾರಂಭವಾಗಿಲ್ಲದಿರುವುದಕ್ಕೆ ಕಾರಣಗಳೇನು;

ಆ) ಈ ಕೆಲಸವನ್ನು ಮುಂದುವರೆಸುವ ಯೋಜನೆ ಸರ್ಕಾರದ ಮುಂದೆ ಇದೆಯೇ;

ಇ) ಈ ಯೋಜನೆ ಮುಂದುವರೆಸುವುದಿದ್ದಲ್ಲಿ ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಪೂರ್ಣಗೊಳಿಸುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ), ಆ) ಮತ್ತು ಇ) ನವಲಗುಂದ ತಾಲ್ಲೂಕಿನ ರಾಜ್ಯ ಹೆದ್ದಾರಿ-45 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರು ವರ್ಷಗಳ ನಿರ್ವಹಣಾ ಪ್ಯಾಕೇಜ್‌ನಲ್ಲಿ ಸೇರ್ಪಡೆಯಾಗಿದ್ದು, 2005ರಿಂದ 2008ರವರೆಗೆ ಕೆಆರ್‌ಡಿಸಿಎಲ್ ವತಿಯಿಂದ ನಿರ್ವಹಣೆ ಮಾಡಲಾಗಿರುತ್ತದೆ.

ಈ ರಸ್ತೆಯ ಕಿ.ಮೀ. 95.95ರಿಂದ 107.95 ರವರೆಗೆ ಹಾಗೂ ಕಿ.ಮೀ. 107.95ರಿಂದ 115.25 ರವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಕ್ರಮವಾಗಿ ರೂ.130.00 ಲಕ್ಷಗಳು ಮತ್ತು ರೂ.140.00 ಲಕ್ಷಗಳ ಅಂದಾಜು

ವೆಚ್ಚದೊಂದಿಗೆ ಲೆಕ್ಕಶೀರ್ಷಿಕೆ 5054 ಯೋಜನೆ ಅಡಿಯಲ್ಲಿ 2009–10ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಸೇರ್ಪಡೆಗೊಳಿಸಲು ಪರಿಶೀಲಿಸಲಾಗುತ್ತಿದ್ದು, ಅನುದಾನದ ಲಭ್ಯತೆಯನ್ನಾಧರಿಸಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಲಾಗುವುದು.

1068 Sri Shankara Patila Munenakoppa : Hon'ble Minister for Public Works kindly answer to the below question?

a) Arabavi-Challakeri road construction work having been completed till Naragunda border, what are the reasons for not commencing work from Navalgunda border;

b) Whether there is any plan before the Government to continue this work;

c) If this work is being continued, when the work will commence and when it will be completed?

Sri C.M.UDASI (Minister for public Works) :

a), b) and c) State Highway-45 in Navalgunda taluk having been included in 3 years maintenance package of Karnataka Road Development Corporation, maintenance has been undertaken by KRDCL from 2005 to 2008.

The development works of km 95.95 to 107.95 and km 107.95 to 115.25 of this road at an estimated cost of Rs.130.00 lakhs and Rs.140.00 lakhs respectively are being considered for inclusion in Appendix-E of 2009-10 under the Head of Account 5054-Plan, these works will be taken up based on availability of funds.

979 ಶ್ರೀ ಓಲೆಕಾರ ನೆಹರೂ ಚನ್ನಬಸಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಹಾಗೂ ಸವಣೂರು ತಾಲ್ಲೂಕುಗಳ ಮಧ್ಯೆ ದೇವಗಿರಿಯಿಂದ ಮೆಳ್ಳಾಗಟ್ಟಿಗೆ ಸೇತುವೆ ನಿರ್ಮಾಣ ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಾದರೆ ಎಂದಿನಿಂದ ಸೇತುವೆ ನಿರ್ಮಿಸುವ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಅನುದಾನದ ಲಭ್ಯತೆ ಮತ್ತು ಅಗತ್ಯತೆ ಮೇರೆಗೆ ಪರಿಗಣಿ ಸಲಾಗುವುದು.